ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 26-11-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಕಾರ್ಮಿಕ ಇಲಾಖೆಯ ನೂತನ ಪೋರ್ಟಲ್ ಹಾಗೂ ಸಂಪೂರ್ಣ ನವೀಕೃತ ಅಂತರ್ಜಾಲ ತಾಣಕ್ಕೆ (ವೆಬ್‌ಸೈಟ್) ಚಾಲನೆ :<br><br>ಚಾಲನೆ:<br><br>ಪಿ. ಟಿ. ಪರಮೇಶ್ವರ ನಾಯ್ಕ,<br>ಕಾರ್ಮಿಕ ರಾಜ್ಯ ಸಚಿವರು. | 27-11-2015<br>ಶುಕ್ರವಾರ<br>ಬೆಳಿಗ್ಗೆ<br>10-00 ಗಂಟೆ | ಬಕಿಂಗ್ ಹ್ಯಾಮ್ – II ಸಭಾಂಗಣ, ಫಾರ್ಚುನ್ ಜೆ.ಪಿ. ಸೆಲೆಸ್ಟಿಯಲ್ ಹೋಟೆಲ್, ಆನಂದರಾವ್ ಸರ್ಕಲ್ ಹತ್ತಿರ, ಬೆಂಗಳೂರು. |
| 2 | "ಮಕ್ಕಳ ಸುರಕ್ಷತಾ ನೀತಿ" ರೂಪಿಸುವ ಕುರಿತಂತೆ ಸಾರ್ವಜನಿಕ ಸಭೆ:<br><br>ಶ್ರೀಮತಿ ಉಮಾಶ್ರೀ,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವೆ. | 27-11-2015<br>ಶುಕ್ರವಾರ<br>ಮಧ್ಯಾಹ್ನ<br>3-00 ಗಂಟೆ | ಜ್ಞಾನಭಾರತಿ ಸಭಾಂಗಣ, ಬೆಂಗಳೂರು ವಿಶ್ವ ವಿದ್ಯಾಲಯದ ಸೆಂಟ್ರಲ್ ಕಾಲೇಜು, ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಚಂದನ ವನ, ವರ್ಷದ ಹಾದಿ ಬಿಡುಗಡೆ
# ಚಲನಚಿತ್ರ ಅಕಾಡೆಮಿ ವೆಬ್‌ಸೈಟ್‌ಗೆ ಚಾಲನೆ

ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ನವೆಂಬರ್ 28 ರಂದು ಶನಿವಾರ ಮಧ್ಯಾಹ್ನ 12.30 ಗಂಟೆಗೆ ಬೆಂಗಳೂರಿನ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಪಿ–2 ಹಾಲ್‌ನಲ್ಲಿ ಚಂದನ ವನ, ವರ್ಷದ ಹಾದಿ ಪುಸ್ತಕ ಬಿಡುಗಡೆ ಹಾಗೂ ಚಲನಚಿತ್ರ ಅಕಾಡೆಮಿಯ ಅಂತರ್ಜಾಲ ಚಾಲನೆ ಸಮಾರಂಭವನ್ನು ಏರ್ಪಡಿಸಿದೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿ ಡಾ. ಎನ್.ಎಸ್. ಚನ್ನಪ್ಪಗೌಡ ಅವರು ಪುಸ್ತಕ ಬಿಡುಗಡೆ ಮಾಡುವರು ಹಾಗೂ ಅಕಾಡೆಮಿಯ ಅಂತರ್ಜಾಲಕ್ಕೆ ಚಾಲನೆ ನೀಡುವರು.

ಅಕಾಡೆಮಿಯ ಅಧ್ಯಕ್ಷ ಶ್ರೀ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರು ಸಮಾರಂಭ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ಚಲನಚಿತ್ರ ಅಕಾಡೆಯ ಅಧ್ಯಕ್ಷ ಟಿ.ಎಸ್. ನಾಗಾಭರಣ, ವಿಧಾನ ಪರಿಷತ್ ಸದಸ್ಯರು ಹಾಗೂ ಮಾಜಿ ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ ತಾರಾ ಅನೂರಾಧಾ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಸಾ.ರಾ. ಗೋವಿಂದು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್. ಆರ್. ವಿಶುಕುಮಾರ್, ಚಂದನವನ–ಸಂಪಾದಕ ಮಂಡಳಿ ಸದಸ್ಯರಾದ ಶ್ಯಾಮಸುಂದರ ಕುಲಕರ್ಣಿ, ಚ.ಹ. ರಘುನಾಥ್, ಎನ್.ವಿಶಾಖ ಹಾಗೂ ಚೇತನ್ ನಾಡಿಗೇರ್ ಅವರು ಭಾಗವಹಿಸುವರು ಎಂದು ಹೆಚ್. ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಹೆಚ್‌ಬಿಡಿ:ಬಾಬು:ಜಿಪಿಆರ್.

# ಬೆಳ್ಳಿಹೆಜ್ಜೆಯಲ್ಲಿ ಡಾ. ಶಿವರಾಜ್‌ಕುಮಾರ್

ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ನವೆಂಬರ್ 30 ರ ಸೋಮವಾರ ಸಂಜೆ 5–00 ಬೆಂಗಳೂರಿನ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಚಲನಚಿತ್ರ ರಂಗದ ಹ್ಯಾಟ್ರಿಕ್ ಹಿರೋ ಡಾ. ಶಿವರಾಜ್ ಕುಮಾರ್ ಅವರೊಂದಿಗೆ ಬೆಳ್ಳಿಹೆಜ್ಜೆ ಸಂವಾದ ಸಮಾರಂಭವನ್ನು ಏರ್ಪಡಿಸಿದೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಸಮಾರಂಭದ ಮುಖ್ಯ ಅತಿಥಿಗಳಾಗಿ ಮೂಲ ಸೌಲಭ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವ ಆರ್. ರೋಷನ್ ಬೇಗ್, ಹಿರಿಯ ಚಲನಚಿತ್ರ ನಿರ್ಮಾಪಕಿ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್, ಹಿರಿಯ ಚಲನಚಿತ್ರ ನಿರ್ಮಾಪಕ ದೊರೈ ಭಗವಾನ್, ಚಲನಚಿತ್ರ ಕಲಾವಿದೆ ಶ್ರೀಮತಿ ಸುಧಾರಾಣಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಸಾ. ರಾ. ಗೋವಿಂದು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್. ಆರ್. ವಿಶುಕುಮಾರ್ ಅವರು ಭಾಗವಹಿಸುವರು ಎಂದು ಹೆಚ್. ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಹೆಚ್‌ಬಿಡಿ:ಬಾಬು:ಜಿಪಿಆರ್.

# ವಿಳಾಸ ಬದಲಾವಣೆ

ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)

ಶಿಗ್ಗಾಂವ ವಿಧಾನಸಭಾ ಕ್ಷೇತ್ರದ ಸದಸ್ಯ ಬಸವರಾಜ್ ಬೊಮ್ಮಾಯಿ ಅವರು ಬದಲಾದ ವಿಳಾಸದಲ್ಲಿ ಪತ್ರ ವ್ಯವಹಾರ ನಡೆಸುವಂತೆ ಕೋರಿದ್ದು, ಇನ್ನು ಮುಂದೆ ನಂ 135, 1ನೇ ಮುಖ್ಯರಸ್ತೆ, ಎಂ.ಎಲ್.ಎ. ಲೇಔಟ್, ಆರ್. ಟಿ. ನಗರ, ಬೆಂಗಳೂರು – 560 032 ಅಥವಾ ದೂರವಾಣಿ ಸಂಖ್ಯೆ 23338218/23339115 ರಲ್ಲಿ ಸಂಪರ್ಕಿಸಬಹುದಾಗಿದೆ.

ಪಲ್ಲವಿ:ಜಿಪಿಆರ್.

# ವಿಳಾಸ ಬದಲಾವಣೆ

ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)

ಹುಮನಾಬಾದ ವಿಧಾನಸಭಾ ಕ್ಷೇತ್ರದ ಸದಸ್ಯ ರಾಜಶೇಖರ್ ಬಿ. ಪಾಟೀಲ್ ಅವರು ಬದಲಾದ ವಿಳಾಸದಲ್ಲಿ ಪತ್ರ ವ್ಯವಹಾರ ನಡೆಸುವಂತೆ ಕೋರಿದ್ದು, ಇನ್ನು ಮುಂದೆ ನಂ. 108/ಸಿ, 5ನೇ ಕ್ರಾಸ್, 3ನೇ ಮುಖ್ಯರಸ್ತೆ, ಎಂ.ಎಲ್.ಎ. ಲೇಔಟ್, ಭೂಪಸಂದ್ರ, ಬೆಂಗಳೂರು – 560 004 ರಲ್ಲಿ ಸಂಪರ್ಕಿಸಬಹುದಾಗಿದೆ.

ಪಲ್ಲವಿ:ಜಿಪಿಆರ್.

# "ಸೈನ್ಸ್ ಇನ್ ಆಕ್ಷನ್" : ವಿಜ್ಞಾನ ಪ್ರದರ್ಶನ

ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)

"ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್ ಸಂಸ್ಥೆಯು ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ "ಸೈನ್ಸ್ ಇನ್ ಆಕ್ಷನ್" ಎಂಬ ಮೂರು ದಿನಗಳ ವಿಜ್ಞಾನ ಪ್ರದರ್ಶನವನ್ನು ನವೆಂಬರ್ 27 ರಿಂದ 29 ರವರೆಗೆ ಆಯೋಜಿಸಿದೆ. ವೈಜ್ಞಾನಿಕ ವಿಷಯಗಳನ್ನೊಳಗೊಂಡ ಸುಮಾರು 25 ಪ್ರಯೋಗಗಳನ್ನು ಪ್ರದರ್ಶಿಸಲಾಗುತ್ತದೆ."

ಈ ಪ್ರದರ್ಶನವು ಬೆಳಿಗ್ಗೆ 10.30 ಗಂಟೆಯಿಂದ ಸಂಜೆ 4.30 ಗಂಟೆವರೆಗೆ ಸಾರ್ವಜನಿಕರಿಗೆ ಲಭ್ಯವಿರುತ್ತದೆ. ಪ್ರದರ್ಶನದ ಪ್ರವೇಶ ಉಚಿತವಾಗಿದ್ದು, ಹೆಚ್ಚಿನ ಮಾಹಿತಿಗಾಗಿ 2237 9725/2226 6084 ಅನ್ನು www.taralaya.org ಸಂಪರ್ಕಿಸಬಹುದಾಗಿದೆ.

ಪಲ್ಲವಿ:ಜಿಪಿಆರ್.

# **“SCIENCE IN ACTION” : THREE DAY EXHIBITION**

**Bangalore, November 26 (Karnataka Information)**

**Bangalore Association for Science Education (BASE) is organizing a three-day exhibition entitlted ‘Science in Action’ from 27th to 29th November, 2015 at the Jawaharlal Nehru Planetarium. About twenty five experiments covering a wide range of concepts in optics and optical illusions will be on display.**

**The exhibition will be open for the public from 10.30 am to 4.30 pm. The entry to the exhibition is free. Further details can be obtained over phone from the Planetrium office on 2226 6084 / 2237 9725 or Website : www.taralaya.org.**

**pallavi.gpr.**

# ಡಿಸೆಂಬರ್ 8 ರಂದು ಕ್ರಾಫ್ಟ್‌ಕೋರ್ಸ್ ಟೈಲರಿಂಗ್ ಥಿಯರಿ ಪರೀಕ್ಷೆ

ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)

2015 ರ ನವೆಂಬರ್/ಡಿಸೆಂಬರ್ ತಿಂಗಳಲ್ಲಿ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಒಂದು ವರ್ಷದ ಕ್ರಾಫ್ಟ್‌ಕೋರ್ಸ್ ಟೈಲರಿಂಗ್ ಥಿಯರಿ ಪರೀಕ್ಷೆಯು ಡಿಸೆಂಬರ್ 8 ರ ಮಂಗಳವಾರ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ನಡೆಯುತ್ತದೆ. ಡಿಸೆಂಬರ್ 8 ರ ನಂತರ ಪ್ರಾಯೋಗಿಕ ಪರೀಕ್ಷೆಗಳು ನಡೆಯುತ್ತವೆ. ಸದರಿ ವೇಳಾಪಟ್ಟಿಯನ್ನು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು/ಅಧಿಕಾರಿಯವರು ಪ್ರಕಟಿಸುವರು. ವಿದ್ಯಾರ್ಥಿಗಳು ಪ್ರವೇಶ್ವ ಪತ್ರಗಳಿಗೆ ಆಯಾ ಸಂಸ್ಥೆಯ/ಪರೀಕ್ಷಾ ಕೇಂದ್ರಗಳನ್ನು ಸಂಪರ್ಕಿಸಿ ಪಡೆಯಬಹುದಾಗಿದೆ ಎಂದು ತಾಂತ್ರಿಕ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.

ಪಲ್ಲವಿ:ಜಿಪಿಆರ್.

# CRAFTS COURSE TAILORING THEORY EXAMINATION

**Bangalore, November 26 (Karnataka Information)**

**Theory Examination for Craft Course in Tailoring which will be conducted by the Board of Technical Examination for November/December 2015 will be held 08-12-2015 (Tuesday) at 11 am to 2pm. the Practical Examinations will be conducted after theory exam. The detailed Practical Examination.**

**Time Table will be announced by the respective Chief Superintendent/Officer of examinations. All the concerned students are here by informed to contact and collected the admission tickets from the concerned Institution/Exam Center say an official press report.**

**pallavi.gpr.**

# ‘ಸಕಾಲ’ ದಲ್ಲಿ 9 ಕೋಟಿ ಅರ್ಜಿ ವಿಲೇವಾರಿ

**ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)**

**ಸಕಾಲ ಯೋಜನೆಯನ್ನು ಈಗಾಗಲೇ 57 ಇಲಾಖೆ ಮತ್ತು 706 ಸೇವೆಗಳಿಗೆ ವಿಸ್ತರಿಸಲಾಗಿದೆ. ಸಕಾಲದಲ್ಲಿ 9 ಕೋಟಿ ಅರ್ಜಿ ವಿಲೇವಾರಿಯಾಗಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.**

**ಇಂದು ವಿಧಾನ ಪರಿಷತ್‌ನ ಪ್ರಶ್ನೋತ್ತರ ವೇಳೆಯಲ್ಲಿ ಕ್ಯಾಪ್ಟನ್ ಗಣೇಶ ಕಾರ್ಣಿಕ್ ಅವರ ಪ್ರಶ್ನೆಗೆ ಉತ್ತರಿಸುತ್ತಾ ಈಗಾಗಲೇ ಸಕಾಲದಲ್ಲಿ ಸೇರಿರುವ ಇಲಾಖೆಗಳನ್ನೊಳಗೊಂಡು ಹೊಸ ಹಾಗೂ ಹೆಚ್ಚುವರಿ ಸೇವೆಗಳನ್ನು ನೀಡುವಂತೆ ಇಲಾಖೆಗಳನ್ನು ಪ್ರೋತ್ಸಾಹಿಸಲಾಗುತ್ತಿದೆ. ಈ ಮೂಲಕ ವಿಳಂಬವನ್ನು ತಪ್ಪಿಸಿ ಆಡಳಿತ ಸುಧಾರಣೆಯಲ್ಲಿ ಪಾರದರ್ಶಕತೆಯನ್ನು ತರಲು ಕ್ರಮವಹಿಸಲಾಗುತ್ತಿದೆ ಎಂದು ಸದನಕ್ಕೆ ತಿಳಿಸಿದ್ದಾರೆ.**

**ಇತ್ತೀಚೆಗೆ ಕೇಂದ್ರ ಸಕಾರದ ಎನ್. ಐ. ಸಿ. ಸಂಸ್ಥೆಯು ಅಭಿವೃದ್ಧಿಪಡಿಸಿದ ತಂತ್ರಾಂಶವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇತ್ಯಾದಿ ಇಲಾಖೆಗಳಲ್ಲಿ ಅಳವಡಿಸಲಾಗಿದೆ. ಅದು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಮತ್ತು ಮುಂದಿನ**

ದಿನಗಳಲ್ಲಿ ಸಂಪೂರ್ಣವಾಗಿ ಎಲ್ಲಾ ಇಲಾಖೆಗಳಲ್ಲಿ ಇ–ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗುವುದು ಎಂದು ಸದನಕ್ಕೆ ವಿವರಿಸಿದರು.

ಇದಕ್ಕೆ ಮೂಲಭೂತ ಸೌಕರ್ಯಗಳಾದ ಅಂತರ್ಜಾಲ ಸಂಪರ್ಕವನ್ನು ಇ–ಆಡಳಿತ ಇಲಾಖೆಯಿಂದ ಮತ್ತು ಇ–ಆಫೀಸ್ ತಂತ್ರಾಂಶವನ್ನು ಒದಗಿಸಲಾಗುತ್ತಿದೆ. ಈ ತಂತ್ರಾಂಶದ ಬಳಕೆಯಿಂದ ಕಚೇರಿಯ ಪತ್ರ ವ್ಯವಹಾರ ಪಾರದರ್ಶಕವಾಗಲಿದ್ದು ಭ್ರಷ್ಟಾಚಾರ ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸಲಿವೆ ಎಂದು ಪರಿಷತ್‌ನಲ್ಲಿ ತಿಳಿಸಿದ್ದಾರೆ.

ಪಲ್ಲವಿ:ಕೆಎನ್‌ವಿ:ಜಿಪಿಆರ್.